

# ಈ ಅಜ್ಜಿಗೆ 247 ಮೊಮ್ಮಕ್ಕಳು!



ಅಬ್ಬಬ್ಬಾ ಎಂದರೆ ಒಬ್ಬ ಅಜ್ಜಿಗೆ ಎಷ್ಟು ಮೊಮ್ಮಕ್ಕಳಿರಬಹುದು? ಎರಡು, ಮೂರು ಹೆಚ್ಚು ಎಂದರೆ ಐದು. ಆದರೆ ಇಲ್ಲೊಬ್ಬ ಅಜ್ಜಿಗೆ ಬರೋಬ್ಬರಿ 247 ಮೊಮ್ಮಕ್ಕಳಿದ್ದಾರೆ.!

ದಕ್ಷಿಣ ಫಿಲಿಪ್ಪೀನ್ಸ್‌ನ ಜನರಲ್ ಸ್ಯಾಂಟೋಸ ಪಟ್ಟಣದಲ್ಲಿರುವ ವುಲಾನ್ ಕುಡಾಂಡಿಂಗ್ ಎಂಬ ಅಜ್ಜಿಯೇ 247 ಮೊಮ್ಮಕ್ಕಳನ್ನು ಪಡೆದ ಸೌಭಾಗ್ಯವಂತೆ..! ಈಕೆ ತನ್ನ ಎಲ್ಲ ಮೊಮ್ಮಕ್ಕಳೊಂದಿಗೆ ರಸ್ತೆಯಲ್ಲಿ ಹೋಗುತ್ತಿದ್ದರೆ ಒಂದು ಮೆರವಣಿಗೆ ಮಾಡಿದಂತಿರುತ್ತದೆ. ಇವಳಿರುವ ರಸ್ತೆಗೆ ಈಕೆಯ ಗಂಡನ ಹೆಸರನ್ನೇ ಇಡಲಾಗಿದೆ.

ಕುಡಾಂಡಿಂಗ್‌ಳಿಗೆ 14 ಮಕ್ಕಳು, 247 ಮೊಮ್ಮಕ್ಕಳು. ಈ ಅಜ್ಜಿಯ ಮರಾವಿಯಾ ಎಂಬ ಹೆಸರಿನ ಮಗಳಿಗೆ 19 ಮಕ್ಕಳು. ಸದ್ಯ ಅಮೆರಿಕ ಸಂಯುಕ್ತ ಸಂಸ್ಥಾನದ 99 ಮೊಮ್ಮಕ್ಕಳಿರುವ ಜೋಡಿಯ ಹೆಸರಿನಲ್ಲಿ ಗಿನ್ನಿಸ್ ದಾಖಲೆ ಇದೆ. ಈ ದಾಖಲೆಯನ್ನು ಮೀರಿಸಿದ ಕೀರ್ತಿ ವುಲಾನ್ ಕುಡಾಂಡಿಂಗ್‌ಳದ್ದು.

■ ಪ್ರಕಾಶ್ ಎಸ್. ಮನ್ನಂಗಿ